ಓ:ಎಸ್:ನಂ. *434/2019*

**ಪಿ.ಡಬ್ಲ್ಯೂ- *1***

***ದಿಃ 30-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

**ಮುಂದುವರಿದ *ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಟಿ ಎಲ್ ಪಿ ವಕೀಲರಿಂದ.***

ವಾದಿಯು ನೋಂದಾಯಿತವಲ್ಲದ ಒಪ್ಪಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಬೇಕೆಂದು ಕೋರಿರುತ್ತಾರೆ. ಪ್ರತಿವಾದಿ ಪರ ವಕೀಲರು ಹಾಜರಿದ್ದು, ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ, ಏಕೆಂದರೆ ಸದರಿ ದಾಖಲೆಯು ಒಪ್ಪಿಗೆ ಪತ್ರವಾಗಿದ್ದು, ಸದರಿ ದಾಖಲೆಯನ್ನು *100* ರೂಪಾಯಿಯ ಛಾಪಾ ಕಾಗದದಲ್ಲಿ ಬರೆದಿದ್ದು, ಸದರಿ ಛಾಪಾ ಕಾಗದಲ್ಲಿ ಆರ್ಟಿಕಲ್ *12* ಎಂದು ನಮೂದಾಗಿದ್ದು, ಸದರಿ ಛಾಪಾ ಕಾಗದವು ಅಗ್ರಿಮೆಂಟ್ ಬರೆಯುವ ಉದ್ದೇಶದಿಂದ ಪಡೆಯಲಾಗಿರುತ್ತದೆ. ಸದರಿ ದಾಖಲೆಯು ಕೊರತೆಯ ಮುದ್ರಾಂಕ ಶುಲ್ಕ ಹೊಂದಿದ್ದು, ಆ ಕಾರಣ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಲು ಬರುವುದಿಲ್ಲ ಎಂದು ತಮ್ಮ ತಕರಾರನ್ನು ಮೌಖಿಕವಾಗಿ ಸಲ್ಲಿಸಿರುತ್ತಾರೆ.

ವಾದಿ ಪರ ವಕೀಲರು ಹಾಜರಿದ್ದು, ವಾದಿ ಮತ್ತು ಪ್ರತಿವಾದಿಯರು ಅಣ್ಣತಮ್ಮಂದಿರಾಗಿದ್ದು ಮತ್ತು ಒಂದೇ ಕುಟುಂಬದ ಸದಸ್ಯರಾಗಿದ್ದು, ವಾದಿ ಮತ್ತು ಪ್ರತಿವಾದಿಯ ಒಪ್ಪಿಗೆ ಮೇರೆಗೆ ದಾವ ಸ್ವತ್ತನ್ನು ಇನ್ನು ಮುಂದೆ ವಿಭಾಗ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ತಾತ್ಕಾಲಿಕವಾಗಿ ದಾವ ಸ್ವತ್ತಿನ ಖಾತೆಯನ್ನು ವಾದಿಯ ಹೆಸರಿಗೆ ದಾಖಲು ಮಾಡಬಹುದೆಂದು ಪ್ರತಿವಾದಿಯು ಒಪ್ಪಿಗೆಯನ್ನು ಸೂಚಿಸಿ ಲಿಖಿವಾಗಿ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ. ವಾದಿ ಪರ ವಕೀಲರು ಮುಂದುವರಿದು ಸದರಿ ಒಪ್ಪಿಗೆ ಪತ್ರದ ಪ್ರಕಾರ ದಾವ ಸ್ವತ್ತಿನ ಖಾತೆಯು ವಾದಿಯ ಹೆಸರಿಗೆ ಆಗಿದ್ದು, ಈ ದಾವೆಯು ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರಕ್ಕಾಗಿ ಕೋರಿ ಸಲ್ಲಿಸಲಾಗಿದ್ದು, collateral purpose ಉದ್ದೇಶಕ್ಕಾಗಿ ಸದರಿ ದಾಖಲೆಯು ನೋಂದಣಿಯಾಗದೇ ಇದ್ದರೂ ಸಹ ಸದರಿ ದಾಖಲೆಯನ್ನು ನಿಶಾನೆಯಾಗಿ ಗುರುತಿಸಬಹುದೆಂದು ಮಂಡಿಸಿರುತ್ತಾರೆ. ತಮ್ಮ ವಾದಕ್ಕೆ

ಪೂರ್ವಕವಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು **Subraya M.N. V/S Vittala M.N and others** , the same is reported in **AIR 2016 Supreme Court-3236.**

ಉಭಯೇತರ ವಕೀಲರ ವಾದವನ್ನು ಆಲಿಸಲಾಯಿತು. ಈ ಪ್ರಕರಣವನ್ನು ಸದರಿ ದಾಖಲೆಯ ಬಗ್ಗೆ ಆದೇಶಕ್ಕಾಗಿ ಕಾಯ್ದಿರಿಸಲಾಯಿತು.

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

*ಓ. ಕೇ. ಸ. ಇ. ಎ. ಒ.*

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***